

# ವಿದ್ಯಾರ್ಥಿಗಳ ಮೇಲೆ ಸಾಮಾಜಿಕ ವ್ಯವಸ್ಥೆಯ ಒತ್ತಡ

ಶಿವನಕೆರೆ ಬಸವಲಿಂಗಪ್ಪ

*ಇಂದಿನ ಸಾಮಾಜಿಕ ಒತ್ತಡದ ಪರಿಣಾಮವಾಗಿ ವಿದ್ಯಾರ್ಜನೆಗೆ ಬೇಕಾದ ಮುಕ್ತವಾತಾವರಣ ಮತ್ತು ಮುಕ್ತ ಮನಸ್ಸು ಇವುಗಳಿಂದ ವಿದ್ಯಾರ್ಥಿಗಳು ವಂಚಿತರಾಗುತ್ತಿದ್ದಾರೆ. ಇದರ ವಿಕೃತ ಪರಿಣಾಮ ಈ ಲೇಖನದಲ್ಲಿ ಪ್ರತಿಬಿಂಬಿತವಾಗಿದೆ. ಶ್ರೀಯುತ ಲೇಖಕರು ದಾವಣಗೆರೆಯಲ್ಲಿರುವ "ಕರುಣ ದಯಾ ಸೇವಾಸಂಸ್ಥೆ" ಯಲ್ಲಿ ಸೇವೆ ಸಲ್ಲಿಸುತ್ತಿರುವರು.*

ದಾವಣಗೆರೆಯಲ್ಲಿ ಒಬ್ಬ ತಾಯಿ ತನ್ನ ಸ್ವಂತ ಮಗಳನ್ನೆ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಲಿಲ್ಲ ಎಂಬ ಕಾರಣಕ್ಕೆ ಸೀಮೆಎಣ್ಣೆ ಹಾಕಿ ಸುಟ್ಟ ಹೃದಯವಿದ್ರಾವಕ, ಬೀಭತ್ಸ, ಕರುಣಾಜನಕ ಘಟನೆ ಕೆಲವು ತಿಂಗಳುಗಳ ಹಿಂದೆ ಪತ್ರಿಕೆಯಲ್ಲಿ ಓದಿದೆ. ನಮ್ಮ ಸಮಾಜದಲ್ಲಿ "ಜನನಿ ಜನ್ಮ ಭೂಮಿ ಸ್ವರ್ಗಕ್ಕಿಂತ ಮಿಗಿಲಾದುವು," "ದೇವರು ಎಲ್ಲ ಕಡೆ ಪ್ರತ್ಯಕ್ಷ ಇರಲಾಗುವುದಿಲ್ಲ, ಆದ್ದರಿಂದಲೇ ತಾಯಿಯನ್ನು ಸೃಷ್ಟಿ ಮಾಡಿದ," "ಜನನಿ ಮೊದಲ ಗುರು, ಜನನಿಯಿಂದ ಪಾಠಕಲಿತ ಜನರು ಧನ್ಯರು", "ಮಾತೃದೇವೋ ಭವ"... ಇತ್ಯಾದಿ ಮಾತುಗಳು ಪ್ರಚಲಿತದಲ್ಲಿವೆ. ಅನೇಕ ತಾಯಂದಿರು ತಮ್ಮ ಮಕ್ಕಳ ಆರೋಗ್ಯಕ್ಕಾಗಿ, ಪ್ರಾಣರಕ್ಷಣೆಗಾಗಿ ಹಗಲಿರುಳು ಬವಣೆ ಪಡುವುದನ್ನೂ ತಮ್ಮ ಪ್ರಾಣತ್ಯಾಗಕ್ಕೂ ತಯಾರಾಗುವುದನ್ನೂ ಪ್ರತಿನಿತ್ಯ ನೋಡುತ್ತೇವೆ. ಮೇಲಿನ ಮಾತುಗಳಾವುವೂ ಉತ್ಪ್ರೇಕ್ಷೆಯಲ್ಲ, ವಾಸ್ತವ ಸತ್ಯ.

ಹೀಗಿರುವಾಗ ಕಾಯುವ ತಾಯಿದೇವಿಯೇ ಮೃತ್ಯುವಿನ ಮಾರಿಯಾಗಿ ತನ್ನ ಮುಗ್ಧ ಮುದ್ದು ಮಗಳನ್ನು ಕೊಂದದ್ದು ಏಕೆ? ಈ ಕಗ್ಗೊಲೆಗೆ, ಶಾಲೆಗಳ, ಸಮಾಜದ, ಒಟ್ಟಾರೆ ಈ ವ್ಯವಸ್ಥೆಯಲ್ಲಿ ಒಂದಾದ ನಮ್ಮೆಲ್ಲರ ಪಾತ್ರವೂ ಇದೆ ಎನ್ನುವುದು ವಾಸ್ತವ ಸತ್ಯವಲ್ಲವೇ? ಇಂತಹ ಸಾಮಾಜಿಕ ವಾತಾವರಣ ಸೃಷ್ಟಿ ಮಾಡಿರುವುದಕ್ಕೆ ನಾವೆಲ್ಲರೂ ಹೊಣೆಗಾರರಲ್ಲವೇ? ಈ ಕೃತ್ಯಕ್ಕೆ ಆ ತಾಯಿ ಕಡೆ ಬೆರಳುಮಾಡಿ ತೋರಿಸಿದರೆ ಉಳಿದ ಮೂರು ಬೆರಳುಗಳು ನಮ್ಮ ವ್ಯವಸ್ಥೆಯ ಹಿನ್ನೆಲೆ ಕಡೆ ಬೆರಳು ಮಾಡಿ ತೋರಿಸುತ್ತವಲ್ಲವೇ? ಹೀಗಿರುವಾಗ ಆಕೆಯೊಬ್ಬಳನ್ನೇ ಪ್ರತ್ಯೇಕಿಸಿ ಆರೋಪಮಾಡಿ ದೋಷಿಯನ್ನಾಗಿಸುವುದು ಎಷ್ಟರ ಮಟ್ಟಿಗೆ ಸರಿ. ವಿವೇಚನೆ ಮಾಡೋಣ.

ನಿರ್ದಿಷ್ಟ ಶಾಲೆಗಳಲ್ಲಿ ಓದಿಸಿದರೆ ಮಾತ್ರ ಮಗುವಿನ ಉನ್ನತಿ ಹಾಗೂ ತಮ್ಮ ಅಂತಸ್ತಿಗೆ ಸರಿ ಎಂದು ಭಾವಿಸುವ ತಂದೆ ತಾಯಿ ಸೀಟು ಗಿಟ್ಟಿಸುವುದಕ್ಕೆ ಪಡಬಾರದ ಪ್ರಯತ್ನ ಪಟ್ಟು, ಸೀಟು ಪಡೆದಾದ ಮೇಲೆ ತಾಯಂದಿರು (ತಂದೆಯರೂ ಸಹ) "ನನ್ನ ಮಗ/ಮಗಳು ಕ್ಲಾಸಿಗೇ ಮೊದಲನೆ ರ್‍ಯಾಂಕ್, ಎರಡನೆಯ ರ್‍ಯಾಂಕ್, 99%" ಇತ್ಯಾದಿಗಳನ್ನು ಹೆಮ್ಮೆಯಿಂದ ನಾಲ್ಕು ಜನರೆದುರು ಹೇಳಿಕೊಂಡು ಪ್ಲೆಗ್ರೂಪ್, ಎಲ್.ಕೆ.ಜಿ, ಯು.ಕೆ.ಜಿ. ಯಿಂದಲೇ ಹೋಲಿಕೆ ಮತ್ತು ಸ್ಪರ್ಧೆಯ ವಿಷಮ ಜ್ವರವನ್ನು ಬಿತ್ತಲಾರಂಭಿಸುತ್ತಾರೆ. ಕಡಿಮೆ ಅಂಕ ಗಳಿಸುವ ಮಕ್ಕಳ ತಂದೆ-ತಾಯಿಗಳ ದುಃಖ, ಖಿನ್ನತೆ, ಅದಕ್ಕಾಗಿ ತಮ್ಮ ಕುದುರೆ ಗೆಲ್ಲಬೇಕೆಂದು ಮಕ್ಕಳನ್ನು ಆಟಗಳನ್ನೂ ಆಡಲು ಬಿಡದೆ ಮುಗ್ಧ ಮನಸ್ಸಿಗೆ ಹೇರುವ ಒತ್ತಡ ಗಮನಿಸಿದಾಗ ಇಂತಹ ವ್ಯವಸ್ಥೆ ನಿಜಕ್ಕೂ ಅನಿವಾರ್ಯವೇ ಎಂದು ಮನನ ಮಾಡಬೇಕಾಗುತ್ತದೆ. ನಂತರ ಮಗು ಉನ್ನತ ತರಗತಿಗಳಿಗೆ ತೇರ್ಗಡೆ ಹೊಂದಿದ ಹಾಗೆ ಈ ಒತ್ತಡ ಜಾಸ್ತಿ ಆಗುತ್ತಾ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ತರಗತಿ ವಿದ್ಯಾರ್ಥಿಗಳು ಹೆಚ್ಚು ಅಂಕ ಗಳಿಸಲಾಗಲಿಲ್ಲದ್ದಕ್ಕೆ, ನಪಾಸದುದಕ್ಕೆ ತಂದೆತಾಯಿಗಳ, ಸಮಾಜದ ನಿಂದನೆಗೆ ಹೆದರಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದನ್ನು ಮನಗಂಡೇ ಕರ್ನಾಟಕ ಸರ್ಕಾರ ರ್‍ಯಾಂಕ್ ಪದ್ಧತಿ ಕೈಬಿಟ್ಟು, ಗ್ರೇಡ್ ಕೊಡುವ ಪದ್ಧತಿ ತಂದು ವಿದ್ಯಾರ್ಥಿಗಳಲ್ಲಿ ಮಾನಸಿಕ ಒತ್ತಡ ಕಡಿಮೆ ಮಾಡಿರುವುದು ಸ್ವಾಗತಾರ್ಹ ಬೆಳವಣಿಗೆ.

ಈ ಹೋಲಿಕೆ ಮತ್ತು ಸ್ಪರ್ಧೆ (comparison and competition) ಇಡೀ ಜಗತ್ತಿನ ಮನುಷ್ಯರಿಗೆ, ಅದರಲ್ಲೂ ೨೧ನೇ ಶತಮಾನದ ಜನರಿಗೆ ಕೆಟ್ಟ ಶಾಪವಾಗಿ ಪರಿಣಮಿಸಿದೆ. ಈ ಹೋಲಿಕೆ ಮತ್ತು ಸ್ಪರ್ಧೆ ಪ್ರಕೃತಿಯಲ್ಲಿ ಇಲ್ಲ. ಇತರೆ ಜೀವಿಗಳಾದ ಪಶು, ಪಕ್ಷಿ, ಸಸಿಗಳಲ್ಲಿ ಇಲ್ಲ, ಅವುಗಳಲ್ಲಿ ಸಹಬಾಳ್ವೆ ಇದೆ. ಕಾಗೆ ಒಂದು ಅಗುಳು ಕಂಡರೆ, ಕೋಳಿ ಒಂದು ಕುಟುಕ ಕಂಡರೆ ಹಂಚಿಕೊಂಡು ತಿನ್ನುವ ಮನೋಭಾವನೆ ಇದೆ. ಮನುಷ್ಯ ಮಾತ್ರ ಶ್ರೇಷ್ಠವಾದುದೆಲ್ಲ ನನ್ನ ಮನೆತನಕ್ಕೆ ಮಾತ್ರ ಇರಲಿ ಎಂದು ಸ್ವಾರ್ಥ ಜೀವಿಯಾಗಿದ್ದಾನೆ. ಒಂದು ಶಾಲೆಯಲ್ಲಿ ಯಾವುದೇ ಒಂದು ಸ್ಪರ್ಧೆ ನಡೆದರೆ ಎಲ್ಲರೂ ತಮ್ಮ ಮಗನೇ ಗೆಲ್ಲಬೇಕೆಂದು ಬಯಸುತ್ತಾರೆಯೇ ಹೊರತು ಇನ್ನೊಬ್ಬರ ಮಕ್ಕಳು ಗೆದ್ದರೆ ಅದು ನಮ್ಮ ಗೆಲುವೆಂದು ಎಂದಿಗೂ ಭಾವಿಸುವುದಿಲ್ಲ. ಹೀಗಾಗಿ ಮನುಷ್ಯರು ಮಾತ್ರ ಸದಾ "ನಾನು" ಇತರೆಯವರಿಗಿಂತ ಹೇಗೊ ಶ್ರೇಷ್ಠ, ಉತ್ತಮ ಎಂಬುದನ್ನು ನೆರೆಯವರೊಂದಿಗೆ ಹೋಲಿಸಿಕೊಂಡು ಸಾಬೀತು ಪಡಿಸಲು ಹೆಣಗುತ್ತಿರುತ್ತಾರೆ. ವಿದ್ಯಾರ್ಥಿಯಾಗಿದ್ದಾಗ ತಂದೆತಾಯಿ, ನೆಂಟರು, ಸಮಾಜ ಗೊತ್ತಿಲ್ಲದ ಹಾಗೆ "ಹೆಚ್ಚು ಅಂಕ ಗಳಿಸು" "ಎಲ್ಲರಿಗಿಂತಲೂ ಮಿಗಿಲಾದ ಕ್ರೀಡಾಪಟುವಾಗು" ಎಂದು ಪ್ರಾರಂಭವಾದ ಹೋಲಿಕೆಯ ಜೀವನ ದೊಡ್ಡವರಾದ ಮೇಲೆ ತನ್ನ ವಿರಾಟ್‌ರೂಪ ಪಡೆದು ಪಾರ್ಥೇನಿಯಂನಂತೆ ಲಂಗುಲಗಾಮು

ಇಲ್ಲವೆ ಬೆಳೆದು ಸದಾ "ನಾನು ಉತ್ತಮ" "ನಾನು ಶ್ರೇಷ್ಠ" "ನನ್ನ ಮನೆತನ ಶ್ರೇಷ್ಠ" "ನನ್ನ ಕಾರು ಶ್ರೇಷ್ಠ" "ನನ್ನದು ಉತ್ತಮ ಮನೆ". ಕೊನೆಗೆ ನನ್ನವು ಶ್ರೇಷ್ಠ ಒಡವೆ, ಬಟ್ಟೆ—ಹೀಗೆಯೇ ಸದಾ ನಾನು ಮೇಲೆಂಬ ಮೇಲರಿಮೆ ಇಟ್ಟುಕೊಂಡು ಅದನ್ನು ಸಾಬೀತುಪಡಿಸಲು ಹಾತೊರೆಯುವ ಮನಸ್ಸು ನಮ್ಮದಾಗುತ್ತದೆ.

ನಾವು ಅಂದುಕೊಂಡಂತೆ ಸಹಜವಾಗಿ ನಮ್ಮ ಆಸೆಗಳು ಈಡೇರುವುದಿಲ್ಲ. ಏಕೆಂದರೆ ಈ ಜಗತ್ತಿನ ೬೦೦ ಕೋಟಿ ಜನರೂ ತಾವು ಹೆಚ್ಚು ಎಂದು ಸಾಬೀತು ಪಡಿಸಲು ಹೋರಾಡುತ್ತಿರುತ್ತಾರೆ. ಆಗ ಇನ್ನೊಬ್ಬರೊಂದಿಗೆ ಸ್ಪರ್ಧೆಯಲ್ಲಿ ಸೋಲು ಅನುಭವಿಸಿದ ಮನಸ್ಸು ದುಃಖದಲ್ಲಿ, ಅಸಹಾಯಕತೆಯಲ್ಲಿ, ಗೊಂದಲದಲ್ಲಿ, ಸಂಕಷ್ಟಗಳಲ್ಲಿ ಸಿಲುಕಿಹಾಕಿಕೊಳ್ಳುತ್ತದೆ. ಇಂತಹ ಮನಸ್ಸು ತನ್ನದೇ ಆದ ದಿನಕ್ಕೆ ಸುಮಾರು ೨೦,೦೦೦ದಿಂದ ೨೨,೦೦೦ ಪುನಃ ಪುನಃ ಬರುವ ಯಾಂತ್ರಿಕ ಯೋಚನಾ ಲಹರಿಯಲ್ಲಿ ಸಿಕ್ಕಿಹಾಕಿಕೊಂಡು, ಅದೇ ಒಂದು ಅಭ್ಯಾಸವಾಗಿ "ನಾನು, ನನ್ನದು" ಎನ್ನುವ ಯೋಚನೆಗಳನ್ನು ಹುಟ್ಟುಹಾಕುತ್ತಾ, ತನ್ನನ್ನೇ ತಾನು ಬಂಧಿಸಿಕೊಂಡಿರುತ್ತದೆ.

ಈ ಬದುಕೇ ಸಂಬಂಧಗಳ ಜಾಲ. ನಾವು ಯಾವಾಗಲೂ ಇನ್ನೊಬ್ಬರನ್ನು ಅವಲಂಬಿಸಲೇಬೇಕು. ಇತರರು ನಮ್ಮನ್ನು ಅವಲಂಬಿಸಿರುತ್ತಾರೆ. ಈ ಬದುಕು ಪರಸ್ಪರಾವಲಂಬಿತ.

ನಮ್ಮ ಸಮಾಜದಲ್ಲಿ ಎಲ್ಲರೂ ಡಾಕ್ಟರ್, ಇಂಜಿನಿಯರ್ ಆಗಿ ಭೂಲೋಕದ ಸ್ವರ್ಗ ಅಮೆರಿಕಾಕ್ಕೆ ಹೋಗಿ ನೆಲೆಸಿದರೆ ಮಾತ್ರ ತಮ್ಮ ಜೀವನ ಸಾರ್ಥಕ ಎಂದು ಭಾವಿಸಿದ್ದೇವೆ. ಆದರೆ ನಮ್ಮ ಸಮಾಜದ ಜೀವನದ ರಥ ಸುಗಮವಾಗಿ ಸಾಗಲು ಉಪಾಧ್ಯಾಯ, ನರ್ಸ್, ಸೇವಕ, ತರಗಾರ, ಬಡಗಿ ....ಇತ್ಯಾದಿ ವೃತ್ತಿಪರರು ಇಲ್ಲದಿದ್ದರೆ ಹೇಗೆ? ಒಂದು ಗಾದೆ ಮಾತಿದೆ: "ಎಲ್ಲರೂ ಕ್ಷೌರಿಕರಾದರೆ ತಲೆ ಬೋಳಿಸಿಕೊಳ್ಳುವವರಾರು?" ನಾವು ಪ್ರಕೃತಿಯನ್ನು ಗಮನಿಸಿದಾಗ ಅಲ್ಲಿ ಎಷ್ಟೊಂದು ವೈವಿಧ್ಯ, ವ್ಯವಸ್ಥೆ, ಸಾಮರಸ್ಯ, ಒಂದನ್ನು ಅವಲಂಬಿಸಿ ಇನ್ನೊಂದು ಬದುಕುವುದು ಎಲ್ಲ ಅರ್ಥವಾಗುತ್ತದೆ. ಹಾಗೆ ನೋಡಿದರೆ ಈ ಬದುಕೇ ಸಂಬಂಧಗಳ ಜಾಲ. ನಾವು ಯಾವಾಗಲೂ ಇನ್ನೊಬ್ಬರನ್ನು ಅವಲಂಬಿಸಲೇಬೇಕು. ಇತರರು ನಮ್ಮನ್ನು ಅವಲಂಬಿಸಿರುತ್ತಾರೆ. ಈ ಬದುಕು ಪರಸ್ಪರಾವಲಂಬಿತ.

ಸ್ವಲ್ಪ ಯೋಚಿಸೋಣ. ಪ್ರಕೃತಿಯಲ್ಲಿ ಒಂದೇ ರೀತಿಯ ಹೂವು, ತರಕಾರಿಗಳು, ಇದ್ದಾವೆಯೇ? ಹಾಗೆ ಮನುಷ್ಯರಲ್ಲೂ ದೈಹಿಕ ರಚನೆ, ರೂಪ, ಧ್ವನಿ, ಕೈಬರಹ, ಎಲ್ಲವೂ ವೈವಿಧ್ಯದಿಂದ ಕೂಡಿದೆ. ವೈವಿಧ್ಯವಿಲ್ಲದೆ ಬಾಳಿಲ್ಲ. ಆದರೆ ನಮ್ಮ ಮನಸ್ಸು ಮಾತ್ರ ಸದಾ "ನಾನು ಏನೋ ಆಗಬೇಕು" ಎಂದು ಬಯಸಿ ಸ್ವತಃ ಮಾನಸಿಕ ಹಿಂಸೆ ಮಾಡಿಕೊಂಡು ನಮ್ಮ ಹತ್ತಿರ ಬಂಧುಗಳಾದ ತಾಯಿ-ತಂದೆ, ಮಗ-ಮಗಳು ಹಾಗೂ ತನ್ನ ಸಂಪರ್ಕಕ್ಕೆ ಬಂದ ಇತರೆಯವರನ್ನು ಹಿಂಸೆಪಡಿಸುತ್ತದೆ. ಹಾಗೆಯೇ ತಾಯಿತಂದೆಗಳು ತಮ್ಮ ಮಗನ ಸಾಮರ್ಥ್ಯ ಗಮನಿಸದೆ ಅವನು ಡಾಕ್ಟರ್‌ನಾಗಿ ಶ್ರೀಮಂತರ ಮಗಳನ್ನು ಮದುವೆ ಮಾಡಿಕೊಂಡು ತನ್ನ ಕೀರ್ತಿ ಪತಾಕೆಯನ್ನು ಗಗನದಲ್ಲಿ ಹಾರಿಸಬೇಕು ಎಂದು ಬಯಸುತ್ತಾರೆ. ಈ ಮಹತ್ವಾಕಾಂಕ್ಷೆ ಬದುಕಿಗೆ ಮಹಾಮಾರಿ.

ಪ್ರಸ್ತುತ ಘಟನೆ ಗಮನಿಸಿದರೆ ಮುಗ್ಧ, ಅಸಹಾಯಕ ಮಗು ಆಂಚಲ್‌ಳು "ಏನೋ ಆಗಬೇಕು, ಎಲ್ಲರಿಗಿಂತಲೂ ಮೊದಲಿರಬೇಕು (ವರದಿಯ ಪ್ರಕಾರ ಆ ಹುಡುಗಿ ಕೆಲವೊಮ್ಮೆ ೯೮% ಅಂಕ ಗಳಿಸಿದ್ದರೂ) ಸರ್ವಶ್ರೇಷ್ಠಳಾಗಬೇಕು ಎಂಬ ಮಹದಾಸೆ ಈ ಹೀನ ಕೃತ್ಯಕ್ಕೆ ಪ್ರೇರಕವಾಗಿದೆ. ಒಂದು ತರಗತಿಯಲ್ಲಿ ೫೦ ವಿದ್ಯಾರ್ಥಿಗಳಿದ್ದರೆ ೫೦ ವಿದ್ಯಾರ್ಥಿಗಳೂ ಮೊದಲ ರ‍್ಯಾಂಕ್ ಬರಲಾಗುತ್ತದೆಯೆ? ಈ ಸ್ಪರ್ಧಾ ವ್ಯವಸ್ಥೆ ಒಬ್ಬನನ್ನು ಶ್ರೇಷ್ಠನನ್ನಾಗಿ ಮಾಡಿ ಇನ್ನಿತರೆ ೪೯ ವಿದ್ಯಾರ್ಥಿಗಳಿಗೆ ಅವನ ಮೇಲೆ ಹೊಟ್ಟೆಕಿಚ್ಚು ಬರುವಂತೆ ಮಾಡುತ್ತದೆ. ಇದರಿಂದ ಮೊದಲಿನ ರ‍್ಯಾಂಕ್ ಸ್ಥಾನ ಬೇರೆಯವರಿಗೆ ಬಿಟ್ಟುಕೊಡಬಾರದೆಂಬ ಛಲ, ಜೊತೆಗೆ ತಂದೆ-ತಾಯಿಗಳ, ಶಾಲೆಯ, ಸ್ವತಃ ತನ್ನ ಮನಸ್ಸಿನ ಒತ್ತಡ ಪ್ರಾರಂಭವಾಗುತ್ತದೆ. ಅಂತಹ ಒತ್ತಡ ಸದಾ ಆ ವಿದ್ಯಾರ್ಥಿಯನ್ನು ಆತಂಕದ ಬದುಕಿಗೆ ತಳ್ಳುತ್ತದೆ. ಹೀಗೆ ಬೆಳೆದ ಮಗುವಿನಲ್ಲಿ ಎಲ್ಲರ ಕನಸಾದ ಇಂಜಿನಿಯರಿಂಗ್, ವೈದ್ಯಕೀಯ ವಿದ್ಯಾಭ್ಯಾಸ ಮಾತ್ರ ಮಾಡಿದರೆ ಶ್ರೇಷ್ಠ, ಇನ್ನಿತರೆ ಕೋರ್ಸ್‌ಗಳು ಕನಿಷ್ಠ ಎನ್ನುವ ಮನೋಭಾವ ಹುಟ್ಟುಹಾಕುತ್ತವೆ.

ಸದಾ ಸಾಧಿಸಬೇಕೆಂಬ ಒತ್ತಡ ಆತಂಕದಲ್ಲಿ ಆತ್ಮಹತ್ಯೆಗಳಾಗುತ್ತಿರುವುದನ್ನು ದಾವಣಗೆರೆ ಹಾಗೂ ಇತರೆ ಕಡೆಗಳಲ್ಲಿ ನೋಡುತ್ತಿದ್ದೇವೆ. ಸುಪ್ರಸಿದ್ಧ ಖರಗಪುರದ ಐ.ಐ.ಟಿ. ಈಗ ಆತ್ಮಹತ್ಯೆಗೆ ಪ್ರಸಿದ್ಧವಾಗಿದೆ. ಜಪಾನಿನಲ್ಲಿ ತರಗತಿಯಲ್ಲಿ ಉತ್ತಮಮಟ್ಟ ಸಾಧಿಸದ ವಿದ್ಯಾರ್ಥಿಗಳನ್ನು ಶಿಕ್ಷಕರು, ಸಹಪಾಠಿಗಳು ಅವಮಾನ ಮಾಡುವುದರಿಂದ ಅಸಹಾಯಕ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿರುವುದನ್ನು ಇತ್ತೀಚೆಗೆ ನಿಯತಕಾಲಿಕದಲ್ಲಿ ಓದಿದೆ. ನಮ್ಮ ಶಾಲೆಗಳಲ್ಲೂ ಪ್ರಥಮ ಬಂದವನಿಗೆ ಪ್ರಾರ್ಥನಾ ಸಮಯದಲ್ಲಿ ಎಲ್ಲರೆದುರು "ಇವನು ಪ್ರಥಮ" ಎಂದು ಮೆಡಲ್ ಕೊಡುವುದು, ಸ್ವಲ್ಪ ಹಿಂದಿರುವ ವಿದ್ಯಾರ್ಥಿಗೆ ತಂದೆ ತಾಯಿ ಕರೆಸಿ, "ಛೀಮಾರಿ ಹಾಕುವುದು" ನಡೆದೇ ಇದೆ. ಆದರೆ ನಮ್ಮ ಐದೂ ಬೆರಳುಗಳು ಸಮವಿಲ್ಲ. ಈ ಬೆರಳುಗಳು ಅಸಮವಾಗಿದ್ದಾಗಲೇ ಎಲ್ಲ ಕೆಲಸಕ್ಕೆ ಉಪಯೋಗಕ್ಕೆ ಬರುವುದು.

ಇಂದು "ಕಲಿಯುವುದು ಕಲಿಕೆಯ ಖುಷಿಗಾಗಿ, ಆಡುವುದು ಆಟದ ಖುಷಿಗಾಗಿಯೇ ಹೊರತು ಗೆಲ್ಲುವುದಕ್ಕಲ್ಲ, ಇತರರನ್ನು ಮೀರಿಸುವುದಕ್ಕಲ್ಲ" ಎನ್ನುವ ನೀತಿಯನ್ನು ನಮ್ಮ ಶಾಲೆಗಳು ಅನುಸರಿಸಬೇಕಾಗಿದೆ. ಒಬ್ಬ ವಿದ್ಯಾರ್ಥಿ ಓದಿನಲ್ಲಿ ಮೊದಲಿಗನಾಗದೆ ಸಂಗೀತಗಾರನಾಗುವ ಸಾಮರ್ಥ್ಯ ಹೊಂದಿದ್ದರೆ ಅದನ್ನು ಬೆಳೆಸಿ

ಕೊಳ್ಳಲು ಪ್ರೋತ್ಸಾಹ ನೀಡಬೇಕು. ಆತಂಕ ಒತ್ತಡವಿಲ್ಲದಿದ್ದಾಗ ಮಾತ್ರ ಮನಸ್ಸು ಪ್ರಶಾಂತವಾಗಿ ಚೆನ್ನಾಗಿ ಕಲಿಯಲು ಸಾಧ್ಯವಾಗುತ್ತದೆ ಎನ್ನುವ ಸತ್ಯವನ್ನು ನಾವು ಮನಗಾಣಬೇಕು. ಒತ್ತಾಯ, ಹೆದರಿಕೆ, ಸ್ಪರ್ಧೆ, ಭಯ ಇದ್ದಾಗ ಖಂಡಿತವಾಗಿಯೂ ಯಾರೂ ಚೆನ್ನಾಗಿ ಕಲಿಯಲು ಆಗುವುದಿಲ್ಲ. ಇದನ್ನು ದಯಮಾಡಿ ಎಲ್ಲರೂ ಅದರಲ್ಲೂ ವಿಶೇಷವಾಗಿ ಶಿಕ್ಷಣತಜ್ಞರು, ಶಾಲೆಗಳ ವ್ಯವಸ್ಥಾಪಕರು, ತಾಯಿತಂದೆಗಳು ವಿಚಾರಮಾಡಬೇಕು.

ಹೀಗೆ ಬಾಲ್ಯದಿಂದ ಶುರುವಾದ ಹೋಲಿಕೆ, ಸ್ಪರ್ಧೆ ಇಡೀ ಜೀವನ ಆವರಿಸಿ ನಮ್ಮ ಸಮಾಜವನ್ನೇ ದಿಕ್ಕು ತಪ್ಪಿಸುತ್ತಿದೆ. ಜೀವನವೆಂದರೆ ಡಾಕ್ಟರೆ, ಇಂಜಿನೀಯರರೆ ಆಗಬೇಕು, ಸುಖದ ಲೋಲುಪತೆಯಲ್ಲಿ ತೇಲಬೇಕು, ವರದಕ್ಷಿಣೆ ತೆಗೆದುಕೊಳ್ಳಬೇಕು, ಅದ್ದೂರಿ ಕಲ್ಯಾಣ (ಯಾರ ಕಲ್ಯಾಣ) ಮಂಟಪದಲ್ಲಿ ಎಲ್ಲರಿಗಿಂತ ಚೆನ್ನಾಗಿ ಆಡಂಬರದಿಂದ ಮದುವೆ ಮಾಡಬೇಕು, ಕೊನೆಗೆ ಗಣ್ಯರನ್ನು ಆಹ್ವಾನಿಸಿ ಅದ್ದೂರಿಯಾಗಿ ಬಹಳ ಜನ ಸೇರಿಸಿ ಸಮಾರಾಧನೆಯನ್ನೂ ಮಾಡಬೇಕು. "ಹೀಗೆ ಮಾತ್ರ ಇದ್ದರೇ ಜೀವನ" ಎಂದು ಸಮಾಜ ನಮಗೆ ಕೆಟ್ಟ ಮೇಲ್ಪಂಕ್ತಿ ಹಾಕಿದೆ. ಆದ್ದರಿಂದ ನಾವೆಲ್ಲರೂ ಪ್ರತಿಷ್ಠಿತರಾಗಲು, ಶ್ರೀಮಂತರಾಗಲು, ಅಪಾರ ಹಣ ಹೊಂದಲು, ಆಡಂಬರ ಜೀವನ ನಡೆಸಲು ಹಪಾಹಪಿಸಿ ಭ್ರಷ್ಟಾಚಾರಿಗಳಾಗಲೂ ಹಿಂಜರಿಯುವುದಿಲ್ಲ ಮತ್ತು ದಿನಕ್ಕೆ ಹದಿನಾಲ್ಕು ಗಂಟೆಗಳಂತೆ ನಲವತ್ತು ಐವತ್ತು ವರ್ಷ ಒತ್ತಡದಲ್ಲಿ ದುಡಿದು ಈ ವಿಷವೃತ್ತಕ್ಕೆ ಬಲಿಪಶುವಾಗಿ ಕೊನೆಗೊಮ್ಮೆ ಮಣ್ಣಾಗುತ್ತೇವೆ. ನಮಗೆ ಸುಮ್ಮನೆ ಪ್ರಶಾಂತವಾಗಿ ಅಬ್ಬರವಿಲ್ಲದೆ ಸರಳವಾಗಿ ಪ್ರಕೃತಿಯ ನಿಧಾನಗತಿಗೆ ಹೊಂದಿಕೊಂಡು ಬದುಕುವ ಸಮಾಧಾನ, ತಾಳ್ಮೆ, ಶಾಂತಿ ಇಲ್ಲ. ಇಂತಹ ಜೀವನದಲ್ಲಿ ಪ್ರಕೃತಿ ಪ್ರೇಮ, ಸತ್ಸಂಗ, ಉತ್ತಮಸಾಹಿತ್ಯ ಓದುವುದು, ಸಂಗೀತ ಆಲಿಸುವುದು, ಮನಶ್ಶಾಂತಿ ಯಾವುದೂ ಇರುವುದಿಲ್ಲ. ಕೊನೆಯ ಪಕ್ಷ ದಿನದ ಕೆಲವು ವೇಳೆಯಾದರೂ ಶಾಂತವಾಗಿ ನೆಮ್ಮದಿಯಿಂದ ಇರಲು ವ್ಯವಧಾನವಿಲ್ಲದಂತಾಗುತ್ತದೆ.

ಇಂತಹ "ಅಶಾಂತ" ಜೀವನವನ್ನು ಹೋಲಿಕೆ ಸ್ಪರ್ಧೆಯ ಮೂಲಕ ನಾವೆಲ್ಲರೂ ಆಹ್ವಾನಿಸಿಕೊಂಡು ಭೂತ ಹಿಡಿದವರಂತೆ ಆಡುತ್ತಾ ಒತ್ತಡದ ಆಧುನಿಕ ಕಾಯಿಲೆಗಳಾದ ಹೈಪರ್‌ಟೆನ್ಶನ್, ಡಯಾಬಿಟೀಸ್, ಹೃದಯಾಘಾತ ಇತ್ಯಾದಿಗಳಿಗೆ ಬಲಿಯಾಗುತ್ತೇವೆ. ಅನೇಕ ಸಾರಿ ಒತ್ತಡದಿಂದ ಪಲಾಯನಗೈಯಲು ಧಾರ್ಮಿಕ ಮನರಂಜನೆ (ಜಾತ್ರೆ, ಹಬ್ಬ, ಹರಿದಿನ ಇತ್ಯಾದಿ) ಮತ್ತು ದೈಹಿಕ ಮನರಂಜನೆ (ಕುಡಿತ, ಜೂಜು, ಸಿನಿಮಾ, ಟಿವಿ. ಅಗತ್ಯಕ್ಕಿಂತ ಹೆಚ್ಚಾಗಿ ರುಚಿಯಾದುದನ್ನು ತಿನ್ನಲು ಹಾತೊರೆಯುವುದು) ಮತ್ತು ಮೂಢನಂಬಿಕೆ (ವಾಸ್ತುಶಾಸ್ತ್ರ, ಭವಿಷ್ಯ ಕೇಳುವುದು) ಇತ್ಯಾದಿಗಳಿಗೆ ಬಲಿಯಾಗುತ್ತೇವೆ. ಆಗ ಆರೋಗ್ಯ, ಮನಶ್ಶಾಂತಿ, ಮಾನವೀಯ ಸಂಬಂಧಗಳು, ಪ್ರೀತಿ, ವಿಶ್ವಾಸ, ಪ್ರಾಮಾಣಿಕತೆ, ನೈತಿಕತೆ ಎಲ್ಲ ಕಳೆದುಕೊಳ್ಳುತ್ತೇವೆ. ಇಂತಹ ದುಃಖದ, ಸ್ವಾರ್ಥದ, ಗೊಂದಲದ, ನರಳಾಟದ, ಸದಾ ಆತಂಕದ, ಒತ್ತಡದ ಜೀವನ ಬೇಕೇ? ಅಥವಾ ಸರಳ ನಿಃಸ್ವಾರ್ಥ ನೆಮ್ಮದಿಯ, ಶಾಂತಿಯ, ಪ್ರಕೃತಿಯಂತೆ ಸಹಜ ಬದುಕು ನಮಗೆ ಬೇಕೆ? ಬಸವಣ್ಣ ಹೇಳಿದಂತೆ, "ಇವನಾರವ ಇವನಾರವ ಎನ್ನದೆ, ಇವ ನಮ್ಮವ, ಇವ ನಮ್ಮವ" ಎಂಬ ಸತ್ಯ ಮನಗಂಡು ಇಲ್ಲಿ ಬದುಕುತ್ತಿರುವ ಎಲ್ಲ ಜೀವಜಂತುಗಳೂ ನನ್ನ ಹಾಗೆಯೇ ಅಂದುಕೊಂಡು ಯಾರೊಂದಿಗೂ ಹೋಲಿಸದೆ, ಸ್ಪರ್ಧಿಸದೆ, ಬದುಕು ಬದುಕಲು ನಮಗೆ ಸಾಧ್ಯವಿದೆಯೇ? ಡಿ.ವಿ. ಗುಂಡಪ್ಪನವರು ಹೇಳುವಂತೆ,

*ಮೊದಲು ನಾನ್, ಎನಗೆ ಮೊದಲೂಟ, ಮೊದಲಿನ ಪೀಠ*
*ಮೊದಲು ನಾನ್, ಎನ್ನುವರು ಬಳಿಕ ಉಳಿದವರು*
*ಇದು ಲೋಕದೆಲ್ಲ ಕಲಹಗಳ ದುಃಖದ ಮೂಲ*
*ಅದುಮಿಕೋ ಅಹಮಿಕೆಯನು ಮಂಕುತಿಮ್ಮ*

ಅಹಂಕಾರದ ನನ್ನ ತುಟಿಗಳನ್ನು ಹೊಲೆದು ಎಲ್ಲರೊಳಗೊಂದಾಗಿ, ಲೋಕದ ಹಿತದಲ್ಲಿ ಮಾತ್ರ ನನ್ನ ಹಿತವಿದೆ, ಸ್ಪರ್ಧೆಯಲ್ಲಿ ಹೋಲಿಕೆಯಲ್ಲಿ ಅಲ್ಲ ಎನ್ನುವುದನ್ನು ತಿಳಿಯಬೇಕು. ಈ ಹೋಲಿಕೆ, ಸ್ಪರ್ಧೆ ತರುವ ಅಹಂಕಾರ ಬಿಟ್ಟು ಮೌನವಾಗಿ ಅದ್ಭುತವಾದ ಈ ಸುಂದರ ಜೀವನವನ್ನು ಅನುಭವಿಸೋಣವೇ? ಪ್ರಕೃತಿಯನ್ನು ಗಮನಿಸುವುದರಿಂದ ನಾವು ಇದನ್ನು ಕಲಿಯಬಹುದು.

### *ಹೀಗೂ ಒಂದು ಶಿಕ್ಷಣ ಸಂಸ್ಥೆ*

ಈ ಶಿಕ್ಷಣಸಂಸ್ಥೆಯಲ್ಲಿ ಪ್ರವೇಶಕ್ಕಾಗಿ ಡೊನೇಷನ್ ಅಥವಾ ಶಿಕ್ಷಣಕ್ಕಾಗಿ ಶುಲ್ಕವಾಗಲೀ ಇಲ್ಲ; ಪ್ರವೇಶ ಪರೀಕ್ಷೆಯೂ ಇಲ್ಲ; ನಿಗದಿತವಾದ ಕನಿಷ್ಠ ವಿದ್ಯಾರ್ಹತೆಯೂ ಇಲ್ಲ. ಕೇವಲ ಕಲಿಯಬೇಕೆಂಬ ಹಂಬಲ ಹಾಗೂ ನಿಯಮಗಳಿಗನುಗುಣವಾಗಿ ಆಶ್ರಮವಾಸ ಮಾಡುವ ಪ್ರಯತ್ನವೊಂದೇ ಪ್ರವೇಶಕ್ಕೆ ಬೇಕಾಗಿರುವ ಅರ್ಹತೆ; ಪ್ರಾರಂಭಿಕ Foundation ಕೋರ್ಸ್ ಮುಗಿಸಿದ ಮೇಲೆ ಯಾವ ಕೋರ್ಸನ್ನು ಬೇಕಾದರೂ ಶಿಕ್ಷಣಾರ್ಥಿ ಆರಿಸಿಕೊಳ್ಳಬಹುದು; ನಿಗದಿತ ಸಮಯದ ಅಂತ್ಯದಲ್ಲಿ ಪರೀಕ್ಷೆ ಇದೆ—ಆದರೆ ಫಲಿತಾಂಶದ ಪ್ರಕಟನೆಯಲ್ಲಿ ಪಾಸ್-ಫೇಲ್ ಇಲ್ಲ; ಪೈಪೋಟಿಯಂತೂ ಇಲ್ಲವೇ ಇಲ್ಲ. ಎಲ್ಲರೂ ಪಾಸ್. ಹಾಗಾಗಿ ಎಲ್ಲರಿಗೂ ಒಂದೇ ಮಾದರಿ ಪ್ರಮಾಣ ಪತ್ರ. ಪರೀಕ್ಷೆ ನಡೆಸುವ ಉದ್ದೇಶ ಕೇವಲ ಶಿಕ್ಷಕರು ಸರಿಯಾಗಿ ವಿಷಯವನ್ನು ತಿಳಿಹೇಳಲು ಸಮರ್ಥರಾಗಿದ್ದಾರೆಯೇ ಎಂದು ತಿಳಿಯಲು ಮತ್ತು ಬೋಧನೆಯ ವಿಧಾನವನ್ನು ಉತ್ತಮಗೊಳಿಸಿಕೊಳ್ಳಲು ಅಷ್ಟೇ.

ಈ ಮಾದರಿಯ ಅಲ್ಪಾವಧಿ ಶಿಕ್ಷಣ ಆ ಪ್ರದೇಶದ ಅನೇಕ ಹಳ್ಳಿಗಳ ಯುವಜನತೆಯನ್ನು ಸ್ವಾವಲಂಬಿಗಳನ್ನಾಗಿ ಮಾಡಿದೆ. ಕುಡಿತ ಮುಂತಾದ ಸಾಮಾಜಿಕ ಸಮಸ್ಯೆಗಳಿಂದ ಮುಕ್ತರಾಗಲು ಪ್ರೋತ್ಸಾಹ ನೀಡಿದೆ, ಸಹಬಾಳ್ವೆಯ ಶಿಕ್ಷಣ ಕೊಟ್ಟಿದೆ ಎಂದರೆ ಆಶ್ಚರ್ಯವಲ್ಲವೇ? ಬೇರೆ ಶಿಕ್ಷಣ ಸಂಸ್ಥೆಗಳು ಈ ಮಾದರಿ ಶಿಕ್ಷಣ ಸಂಸ್ಥೆಯನ್ನು ಅನುಸರಿಸಲು ಮುಂದೆ ಬರುವವೇ?

*ಸಂಸ್ಥೆಯ ಹೆಸರು : ದಿವ್ಯಾಯನ ಕೃಷಿ ವಿಜ್ಞಾನ ಕೇಂದ್ರ, ರಾಮಕೃಷ್ಣ ಮಿಷನ್, ರಾಂಚಿಯಲ್ಲಿನ ಒಂದು ಪ್ರಯೋಗ* ೦